TABSME AOF FOR ONI

**ನಿಯಮಗಳು ಮತ್ತು ಷರತ್ತುಗಳು**

ಎಲೆಕ್ಟ್ರಾನಿಕ್ ನಮೂನೆಯನ್ನು ಭರ್ತಿಮಾಡುವುದು: ಟ್ಯಾಬ್ಲೆಟ್‌ಗಳು ಮತ್ತು ಮೊಬೈಲ್ ಬಳಸಿ ಎಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ನಾನು/ನಾವು ಈ ಮೂಲಕ ದೃಢೀಕರಿಸುತ್ತೇನೆ/ವೆ ಮತ್ತು ಉದ್ಯೋಗಿ/ಪ್ರತಿನಿಧಿ ID ______________________ ______________________ಅನ್ನು ಹೊಂದಿರುವ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್‌ನ ಉದ್ಯೋಗಿ/ಪ್ರತಿನಿಧಿಯಾದ ______ ಅವರಿಗೆ ನನ್ನ/ನಮ್ಮ ಪರವಾಗಿ ಮತ್ತು ನಾನು ನೀಡಿದ ಸೂಚನೆಗಳ ಪ್ರಕಾರ ಎಲೆಕ್ಟ್ರಾನಿಕ್ ಅರ್ಜಿ ನಮೂನೆಯಲ್ಲಿ ಖಾತೆ ತೆರೆಯುವ ವಿವರಗಳನ್ನು ನಮೂದಿಸಲು ಅಧಿಕಾರ ನೀಡುತ್ತೇನೆ/ವೆ. ಎಲೆಕ್ಟ್ರಾನಿಕ್ ಅರ್ಜಿ ನಮೂನೆಯಲ್ಲಿ ಅವರು ನಮೂದಿಸಿದ ವಿವರಗಳನ್ನು ನಾನು/ನಾವು ವಿಮರ್ಶಿಸಿದ್ದೇನೆ/ವೆ ಮತ್ತು ಪರಿಶೀಲಿಸಿದ್ದೇನೆ/ವೆ ಹಾಗೂ ಅವು ನಿಜವಾಗಿವೆ, ಸರಿಯಾಗಿವೆ ಮತ್ತು ಹೊಸದಾಗಿವೆ ಮತ್ತು ಅರ್ಜಿಯ ವಿವರಗಳನ್ನು ನಾನು ವಿಮರ್ಶೆ, ಪರಿಶೀಲನೆ ಮತ್ತು ದೃಢೀಕರಣ ಮಾಡಿದ ನಂತರವೇ ಎಲೆಕ್ಟ್ರಾನಿಕ್ ಅರ್ಜಿ ನಮೂನೆಗೆ ಸಂಬಂಧಿಸಿದಂತೆ ಮೇಲೆ ತಿಳಿಸಲಾದ ಉಲ್ಲೇಖ ಸಂಖ್ಯೆಯನ್ನು ರಚಿಸಲಾಗಿದೆ ಎಂದು ದೃಢೀಕರಿಸಿದ್ದೇನೆ/ವೆ. ಎಲೆಕ್ಟ್ರಾನಿಕ್ ಅರ್ಜಿ ನಮೂನೆ ಮತ್ತು ಭೌತಿಕ ಅರ್ಜಿ ನಮೂನೆಗಳೆರಡೂ ಸೇರಿ, ಮೇಲೆ ತಿಳಿಸಿದ ಅರ್ಜಿ ಸಂಖ್ಯೆಗೆ ಖಾತೆ ತೆರೆಯುವ ದಾಖಲೆಗಳನ್ನು ರೂಪಿಸುತ್ತವೆ.

ನಾನು/ನಾವು (ಈ ಸಂದರ್ಭದಲ್ಲಿ, "ನಾನು/ನಾವು", "ನನ್ನ/ನಮ್ಮ", "ನನಗೆ/ನಮಗೆ" ಎಂದರೆ ಖಾತೆಯನ್ನು ಹೊಂದಿದ ಎಲ್ಲರೂ ಎಂದರ್ಥ) ಈ ಕೆಳಗಿನ ನಿಯಮಗಳು ಮತ್ತು ಷರತ್ತುಗಳನ್ನು ಓದಿದ್ದೇನೆ/ವೆ ಮತ್ತು ಅರ್ಥ ಮಾಡಿಕೊಂಡಿದ್ದೇನೆ/ವೆ ಹಾಗೂ ನಿಯಮಗಳು ಮತ್ತು ಷರತ್ತುಗಳಿಗೆ ಮಾಡಿರುವ ಯಾವುದೇ ಬದಲಾವಣೆಗಳು www.axisbank.com ವೆಬ್‌ಸೈಟ್‌ನಲ್ಲಿ ಮಾತ್ರ ಲಭ್ಯವಿರುತ್ತವೆ ಎಂದು ಅರ್ಥಮಾಡಿಕೊಂಡಿದ್ದೇನೆ/ವೆ.

**ಖಾತೆ ತೆರೆಯುವಿಕೆ/ಸೇವಾ ನಿಬಂಧನೆ:** ಖಾತೆಯನ್ನು ತೆರೆಯುವುದು ಸೇರಿದಂತೆ ಎಲ್ಲಾ ಸೇವೆಗಳು ನಾನು ಒದಗಿಸಿದ ಮಾಹಿತಿ/ದಾಖಲೆಗಳ ಪರಿಶೀಲನೆಗೆ ಒಳಪಟ್ಟಿರುತ್ತವೆ. ಈ ಖಾತೆಯನ್ನು ತೆರೆಯಲು ಸಾಧ್ಯವಾಗದಿದ್ದಲ್ಲಿ, ನಾನು/ನಾವು ಆರಂಭದಲ್ಲಿ ಖಾತೆಗೆ ರೂ. 20,000 ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಹಣವನ್ನು ನಗದು ರೂಪದಲ್ಲಿ ಜಮಾ ಮಾಡಿದ್ದರೆ, ಅದನ್ನು ನನಗೆ DD/ಚೆಕ್ ಅಥವಾ PO ರೂಪದಲ್ಲಿ ಮಾತ್ರ ಮರುಪಾವತಿಸಲಾಗುತ್ತದೆ. ಪಾಕಿಸ್ತಾನದ ಘಟಕಕ್ಕೆ ತನ್ನ ಯೋಜನಾ ಕಚೇರಿಯ ಖಾತೆಯನ್ನು ತೆರೆಯಲು RBI ಅನುಮೋದನೆಯ ಅಗತ್ಯವಿದೆ.

**ಹಾಲಿ ಗ್ರಾಹಕರ** ID: ಪ್ರಸ್ತುತ ಗ್ರಾಹಕರ ಸಂದರ್ಭದಲ್ಲಿ, ಅವರು ತಮ್ಮ ಗ್ರಾಹಕರ ID ಯನ್ನು ಘೋಷಿಸದೆ, ಹೊಸ ಗ್ರಾಹಕರೆಂದು ಅರ್ಜಿ ಸಲ್ಲಿಸಿದಲ್ಲಿ, ಅಂತಹ ಸಂದರ್ಭಗಳಲ್ಲಿ ನನಗೆ/ನಮಗೆ ಯಾವುದೇ ಮುನ್ಸೂಚನೆ ನೀಡದೆ, ಗ್ರಾಹಕರ ID ಗಳನ್ನು ತಾನು ನಿರ್ಧರಿಸಬಹುದಾದ ರೀತಿಯಲ್ಲಿ ಸಂಯೋಜಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

**ಸೇವೆಗಳು:** ಎಕ್ಸಿಸ್ ಬ್ಯಾಂಕ್ ತನ್ನ ಎಲ್ಲ ಸೇವೆಗಳನ್ನು ಅತ್ಯುತ್ತಮ ಪ್ರಯತ್ನದ ಆಧಾರದಲ್ಲೇ ಒದಗಿಸುತ್ತದೆ. ನನಗೆ ಲಭ್ಯವಿರುವ ಸೇವೆಗಳ ಸಂಪೂರ್ಣ ಪಟ್ಟಿಯು www.axisbank.com ನಲ್ಲಿ ಲಭ್ಯವಿರುತ್ತದೆ

**ಶುಲ್ಕಗಳು ಮತ್ತು ಶುಲ್ಕಗಳು:** ನನ್ನ ಖಾತೆಗೆ ಮತ್ತು ನಾನು ಪಡೆದ ಇತರ ಸೇವೆಗಳಿಗೆ, ಶೆಡ್ಯೂಲ್ ಆಫ್ ಚಾರ್ಜಸ್‌ನಲ್ಲಿ ಮತ್ತು www.axisbank.com ವೆಬ್‌ಸೈಟ್‌ನಲ್ಲಿ ವಿವರಿಸಿದಂತೆ ಶುಲ್ಕಗಳು ಅನ್ವಯವಾಗುತ್ತವೆ. ಕಾಲಕಾಲಕ್ಕೆ ಅನ್ವಯವಾಗುವ ಸರಕು ಮತ್ತು ಸೇವಾ ತೆರಿಗೆ ಮತ್ತು ಇತರ ಶಾಸನಬದ್ಧ ತೆರಿಗೆಗಳನ್ನು ಎಲ್ಲ ಶುಲ್ಕಗಳ ಮೇಲೆ ವಿಧಿಸಲಾಗುತ್ತದೆ.

**ಶುಲ್ಕಗಳು ಮತ್ತು ಸೇವೆಗಳಲ್ಲಿನ ಬದಲಾವಣೆ:** ಶುಲ್ಕಗಳು, ಸೇವೆಗಳು ಅಥವಾ ಬಡ್ಡಿದರದಲ್ಲಿನ ಯಾವುದೇ ಬದಲಾವಣೆ/ ಸ್ಥಗಿತಗೊಳಿಸುವಿಕೆಯನ್ನು ಪತ್ರ/SMS/ವೆಬ್‌ಸೈಟ್/ಇಮೇಲ್ ಅಥವಾ ಇತರ ವಿಧಾನಗಳ ಮೂಲಕ ಕನಿಷ್ಠ 30 ದಿನಗಳ ಮುಂಚಿತವಾಗಿ ನನಗೆ ತಿಳಿಸಲಾಗುತ್ತದೆ.

**ವಸೂಲಾತಿ:** ಶುಲ್ಕಗಳನ್ನು ಪಾವತಿಸಲು ಖಾತೆಯಲ್ಲಿ ಶಿಲ್ಕು ಲಭ್ಯವಿಲ್ಲದ ಸಂದರ್ಭದಲ್ಲಿ, ಕಲೆಕ್ಷನ್ ಪ್ರಕ್ರಿಯೆಯಿಂದ ಬರುವ ಹಣ ಅಥವಾ ಯಾವುದೇ ಟೇವಣಿಗಳಿಂದ ಖಾತೆಗೆ ಜಮಾ ಆಗುವ ಮೊತ್ತವನ್ನೂ ಒಳಗೊಂಡಂತೆ ಲಭ್ಯವಿರುವ ಯಾವುದೇ ಕ್ರೆಡಿಟ್ ಅನ್ನು ಶುಲ್ಕಗಳ ಮೊತ್ತಕ್ಕೆ ಸರಿಹೊಂದಿಸಲು ಎಕ್ಸಿಸ್ ಬ್ಯಾಂಕ್‌ಗೆ ನಾನು ಅಧಿಕಾರವನ್ನು ನೀಡುತ್ತೇನೆ.

**ಖಾತೆಯನ್ನು ನಿಷ್ಕ್ರಿಯಗೊಳಿಸುವುದು (ಫ್ರೀಜ್):** ನಿರ್ದಿಷ್ಟವಾಗಿ ತಿಳಿಸದ ಹೊರತು, ಈ ಕೆಳಗಿನ ಸಂದರ್ಭಗಳಲ್ಲಿ ನನಗೆ ಸೂಚನೆ ನೀಡಿ ನನ್ನ ಖಾತೆಯನ್ನು ನಿಷ್ಕ್ರಿಯಗೊಳಿಸಲು ನಾನು ಬ್ಯಾಂಕ್‌ಗೆ ಅಧಿಕಾರ ನೀಡುತ್ತೇನೆ. a. ನನ್ನ ಖಾತೆಯಲ್ಲಿ NEFT, RTGS ಇತ್ಯಾದಿಗಳ ಮೂಲಕ ಮಾಡಿದ ಎಲ್ಲಾ ನಗದು, ಚೆಕ್, DDಗಳು ಮತ್ತು ಇತರ ಜಮಾ/ವಹಿವಾಟುಗಳಿಗೆ ಸಂಬಂಧಿಸಿದ ಟೇವಣಿಗಳು ಕಾಲಕಾಲಕ್ಕೆ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳಿಗೆ ಅನುಸಾರವಾಗಿಲ್ಲ ಅಥವಾ ಅವುಗಳನ್ನು ಉಲ್ಲಂಘಿಸಿವೆ ಎಂದು ಬ್ಯಾಂಕ್ ಶಂಕಿಸಿದರೆ, ಬ್ಯಾಂಕ್ ಖಾತೆಯನ್ನು ನಿಷ್ಕ್ರಿಯಗೊಳಿಸಬಹುದು ಮತ್ತು ಅಂತಹ ಟೇವಣಿ/ವಹಿವಾಟುಗಳಿಗೆ ನಾವೇ ಜವಾಬ್ದಾರರಾಗಿರುತ್ತೇವೆ/ಹೊಣೆಗಾರರಾಗಿರುತ್ತೇವೆ. b. ನನ್ನ ಖಾತೆಯನ್ನು ಅಕ್ರಮವಾಗಿ ಸಂಪಾದಿಸಿದ ಹಣದ ವರ್ಗಾವಣೆಗಾಗಿ ಅಥವಾ ಅನಧಿಕೃತ ಹಣ ಸಂಚಯನದ ಮಾಧ್ಯಮವಾಗಿ ಅಥವಾ ಯಾವುದೇ ಕಾನೂನುಬಾಹಿರ ಚಟುವಟಿಕೆಯ ಮಾರ್ಗವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಶಂಕಿಸಿದರೆ. (ಈ ಸಂದರ್ಭದಲ್ಲಿ ನನಗೆ/ನಮಗೆ ನೋಟಿಸ್ ಅನ್ನು ಕಳುಹಿಸಲಾಗುವುದಿಲ್ಲ)

**ಖಾತೆ ಮುಚ್ಚುವಿಕೆ:** ಈ ಕೆಳಗಿನ ಸಂದರ್ಭಗಳಲ್ಲಿ, ನನಗೆ ಮುಂಚಿತವಾಗಿ ಸೂಚನೆ ನೀಡಿ, ನನ್ನ ಖಾತೆಯನ್ನು ಮುಚ್ಚಲು ನಾನು ಬ್ಯಾಂಕ್‌ಗೆ ಅಧಿಕಾರ ನೀಡುತ್ತೇನೆ: a. 3 ತಿಂಗಳು ಅಥವಾ ಇನ್ನೂ ಹೆಚ್ಚಿನ ಅವಧಿಗೆ ನನ್ನ ಖಾತೆಯಲ್ಲಿನ ಶಿಲ್ಕು ಶೂನ್ಯವಾಗಿದ್ದರೆ; b. ನನ್ನ ಖಾತೆಯಿಂದ ಪಾವತಿಗಳು ಅಮಾನ್ಯಗೊಂಡ ಘಟನೆಗಳು ಹೆಚ್ಚಿದ್ದರೆ; c. ಕಾಲಕಾಲಕ್ಕೆ ಯಾವುದೇ ನ್ಯಾಯಾಲಯ/ಶಾಸನಬದ್ಧ/ನಿಯಂತ್ರಣಾ ಪ್ರಾಧಿಕಾರಗಳು ಹೊರಡಿಸಿದ/ನಿರ್ದೇಶಿಸಿದ ಯಾವುದೇ ಆದೇಶ, ಸೂಚನೆಗಳು, ನಿರ್ದೇಶನಗಳು, ಮಾರ್ಗಸೂಚಿಗಳಿಗೆ ಅನುಸಾರವಾಗಿ ಬ್ಯಾಂಕ್ ನಿರ್ಧರಿಸಬಹುದಾದಂತಹ ಇತರ ಸಂದರ್ಭಗಳು.

**ವಹಿವಾಟುಗಳು:** ನಾನು ಖಾತೆಗೆ ಸಂಬಂಧಿಸಿದಂತೆ ಎಕ್ಸಿಸ್ ಬ್ಯಾಂಕ್‌ಗೆ ಹಣಕಾಸಿನ/ಹಣಕಾಸಿನದಲ್ಲದ (ಉದಾ: ಚೆಕ್ ಬುಕ್/ಕಾರ್ಡ್ ವಿತರಣೆ, ಹಣಕಾಸು ವಹಿವಾಟುಗಳು, ವೈಯಕ್ತಿಕ ವಿವರಗಳ ನವೀಕರಣ ಇತ್ಯಾದಿ) ಯಾವುದೇ ಸೂಚನೆಗಳನ್ನು ಆ ಸಮಯದಲ್ಲಿ ಪ್ರಸ್ತುತವಿರುವ ನಿಯಂತ್ರಕ ಮಾರ್ಗಸೂಚಿಗಳ ಆಧಾರದ ಮೇಲೆ ಬ್ಯಾಂಕ್ ನಿರ್ದಿಷ್ಟಪಡಿಸುವ ಅಧಿಕೃತ ಚಾನೆಲ್‌ಗಳ ಮೂಲಕವೇ ಒದಗಿಸುತ್ತೇನೆ. ಅಧಿಕೃತವಲ್ಲದ ಚಾನೆಲ್‌ಗಳ ಮೂಲಕ ಬರುವ ಸೂಚನೆಗಳ ಅನುಸಾರ ಎಕ್ಸಿಸ್ ಬ್ಯಾಂಕ್ ಕಾರ್ಯನಿರ್ವಹಿಸುತ್ತದೆ ಎಂದು ನಿರೀಕ್ಷಿಸಲಾಗುವುದಿಲ್ಲ, ಆದರೆ ವಿಶೇಷ ಸಂದರ್ಭಗಳಲ್ಲಿ ಅಂತಹ ಸೌಲಭ್ಯಗಳನ್ನು ಒದಗಿಸಲು ತನ್ನ ವಿವೇಚನೆಯ ಮೇರೆಗೆ ಕಾರ್ಯನಿರ್ವಹಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

**ಚಾನೆಲ್ ಸೌಲಭ್ಯ:** ಚಾನೆಲ್ ಸೇವಾ ಸೌಲಭ್ಯವನ್ನು ಪಡೆಯಬಯಸುವ ಅಧಿಕೃತವಲ್ಲದ ಸಹಿದಾರರು ಚಾನೆಲ್ ನೋಂದಣಿ ನಮೂನೆಯನ್ನು ಭರ್ತಿ ಮಾಡಬೇಕು ಮತ್ತು ಬೆಂಬಲಿಸುವ ದಾಖಲೆಗಳೊಂದಿಗೆ ಅದನ್ನು ಸಲ್ಲಿಸಬೇಕು.

**ಚೆಕ್ ಬುಕ್:** ಸಾಕಷ್ಟು ಶಿಲ್ಕು ಲಭ್ಯವಿರದ ಕಾರಣಕ್ಕಾಗಿ ಒಂದು ಹಣಕಾಸು ವರ್ಷದಲ್ಲಿ ನಾಲ್ಕು ಬಾರಿ ರೂ. 1 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಚೆಕ್‌ಗಳು ವಾಪಸಾಗಿದ್ದರೆ ಅಥವಾ ಸಾಕಷ್ಟು ಶಿಲ್ಕು ಲಭ್ಯವಿರದ ಕಾರಣಕ್ಕಾಗಿ ಒಂದು ತ್ರೈಮಾಸಿಕದಲ್ಲಿ ರೂ. 1 ಕೋಟಿಗಿಂತ ಕಡಿಮೆ ಮೊತ್ತದ 8 ಚೆಕ್‌ಗಳು ವಾಪಸಾಗಿದ್ದರೆ ಹೊಸ ಚೆಕ್ ಬುಕ್ ಅನ್ನು ನೀಡಲಾಗುವುದಿಲ್ಲ.

**ಡೆಬಿಟ್ ಕಾರ್ಡ್:** ಎಕ್ಸಿಸ್ ಬ್ಯಾಂಕ್ ಒದಗಿಸುವ ಎಲ್ಲಾ ಸೌಲಭ್ಯಗಳು www.axisbank.com ವೆಬ್‌ಸೈಟ್‌ನಲ್ಲಿ ಒದಗಿಸಲಾದ ನಿರ್ದಿಷ್ಟ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತವೆ. ಪಾಸ್‌ವರ್ಡ್‌ಗಳು, PINಗಳು ಅಥವಾ IDಗಳು /TFConnect ನಂತಹ ಸೂಕ್ಷ್ಮ ಮಾಹಿತಿಯನ್ನು ನಾನು ಯಾರಿಗಾದರೂ ಬಹಿರಂಗಪಡಿಸಿದ ಸಂದರ್ಭದಲ್ಲಿ, ಅದರಿಂದಾದ ವಂಚನೆಗೆ ಎಕ್ಸಿಸ್ ಬ್ಯಾಂಕ್ ಹೊಣೆಗಾರನಾಗಿರುವುದಿಲ್ಲ.

**ಡಿಜಿ ವೆಲ್‌ಕಮ್ ಕಿಟ್:** ನಿಯಮಗಳು ಮತ್ತು ಷರತ್ತುಗಳು ಹಾಗೂ ಬದ್ಧತೆಯ ಸಂಹಿತೆ, ಡೆಬಿಟ್ ಕಾರ್ಡ್ MITC ಮತ್ತು ಕರೆಂಟ್ ಅಕೌಂಟ್ ಬಂಡಲಿಂಗ್ ಲೀಫ್‌ಲೆಟ್ ತರಹದ ಇತರ ಕರಪತ್ರಗಳನ್ನು ಖಾತೆಯನ್ನು ತೆರೆದ ಬಳಿಕ SMS ಮತ್ತು ಇಮೇಲ್ ಮೂಲಕ ಕಳುಹಿಸಲಾಗುತ್ತದೆ.